# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-657/2016/ಡಿಆರ್ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 3/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ಜಗದೀಶ್, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಹನುಮಂತಪ್ಪ ದುರ್ಗ, ಟೀಚರ್ಸ್ ಕಾಲೋನಿ, ಸರ್ಕಾರಿ ಶಾಲೆ ಮುಂಭಾಗ, ಸ್ಟೇಡಿಯಂ ರಸ್ತೆ, ಚಿತ್ರದುರ್ಗ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀ.ಜಗದೀಶ್, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಸರ್ಕಾರದಿಂದ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಔಷದೋಪಚಾರಗಳಿಗೆ ಬರುತ್ತಿರುವ ವಿವಿಧ ಯೋಜನೆಯ ಲಕ್ಷಾಂತರ ರೂಪಾಯಿ ಹಣವನ್ನು ಜಿಲ್ಲಾ ಶಸ್ತ್ರ ಚಿಕಿತ್ಸಕ ಜಗದೀಶ್‌ರವರು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಟೆಂಡರ್ ಕರೆಯದೆ ತಮಗೆ ಬೇಕಾದ ಏಜೆನ್ಸಿ ಕಡೆಯಿಂದ ಔಷಧ ಉಪಕರಣಗಳನ್ನು ಖರೀದಿಸುತ್ತಿರುವುದು, ಸಿಬ್ಬಂದಿ ವರ್ಗದಿಂದ ಅಂದರೆ, ಹೆರಿಗೆ ವಾರ್ಡ್ ಮತ್ತು ಇತರ ವೈದ್ಯರುಗಳಿಂದ ತಿಂಗಳ ಮಾಮೂಲಿ ವಸೂಲಿ ಮಾಡುತ್ತಿರುವುದು, ಎನ್.ಆರ್.ಹೆಚ್.ಎಂ. ಯೋಜನೆ ಹಾಗೂ ಬಿ.ಆರ್.ಜಿ.ಎಫ್. ಯೋಜನೆ ಹಾಗೂ ಇತರೆ ಯೋಜನೆಯಡಿಯಲ್ಲಿ ಬರುತ್ತಿರುವ ಲಕ್ಷಾಂತರ ರೂಪಾಯಿ ಅನುದಾನವನ್ನು ಎದುರುದಾರರು ದುರುಪಯೋಗ ಪಡಿಸಿಕೊಂಡಿರುತ್ತಾರೆ ಮತ್ತು ಕೆ.ಟಿ.ಪಿ.ಪಿ. ನಿಯಮವನ್ನು ಪಾಲಿಸದೆ ಕಾನೂನು ಉಲ್ಲಂಘನೆ ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದಿ.15/4/15 ರಂದು ರೂ.83,000/- ಗಳಿಗೆ ಪಲ್ಸ್ ಅಕ್ಸಿಮೀಟರ್ ಮತ್ತು ರೂ.99,350/- ಕ್ಕೆ ರೇಡಿಯಂಟ್ ವಾರ್ಮರ್ ಉಪಕರಣಗಳನ್ನು ಪ್ರತ್ಯೇಕವಾಗಿ ಕೆ.ಟಿ.ಪಿ.ಪಿ. ನಿಯಮಾವಳಿಗಳ ಪ್ರಕಾರ ಖರೀದಿಸಲಾಗಿದೆ. ಅದರ ವೆಚ್ಚವನ್ನು ಎನ್.ಹೆಚ್.ಎಂ. ಮಾರ್ಗಸೂಚಿ ಪ್ರಕಾರ ವೆಚ್ಚ

ಮಾಡಲಾಗಿದೆ. ಆರೋಗ್ಯ ರಕ್ಷಾ ಸಮಿತಿಯ ಸಭೆಯಲ್ಲಿ ಮಂಡಿಸಿ ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಲಾಗಿದೆ. ದಿ.8/7/15 ರಂದು ರೂ.94,950/– ಬೆಲೆಯ ಐ.ಎಲ್.ಆರ್.ನ್ನು ಮುಖ್ಯ ಔಷಧಿ ಉಗ್ರಾಣದಲ್ಲಿ ಜೀವ ರಕ್ಷಕ ಔಷಧಿ ಶೇಖರಣೆ ಮಾಡಲು ಮತ್ತು ಸುರಕ್ಷಿತವಾಗಿ ಕಾಪಾಡಲು ಕೆ.ಟಿ.ಪಿ.ಪಿ. ನಿಯಮಾನುಸಾರ ಖರೀದಿಸಲಾಗಿದೆ. ಅದೇರೀತಿ ಯು.ಪಿ.ಎಸ್ ಮತ್ತು ಬ್ಯಾಟರಿಯನ್ನು ಕೂಡ ನಿಯಮಾನುಸಾರ ಖರೀದಿಸಲಾಗಿದೆ. ದಿ.7/9/15 ರಂದು ರೂ.92,000/– ಬೆಲೆಯ ಔಷಧಿಯನ್ನು ಟೆಂಡರ್ ಮೂಲಕ ಖರೀದಿಸಲಾಗಿರುತ್ತದೆ. ಡಯಾಲಿಸಿಸ್ ಯಂತ್ರ ಅಳವಡಿಸಲು ಪ್ರತ್ಯೇಕ ಕೊಠಡಿ ನಿರ್ಮಾಣಕ್ಕೆ ರೂ.4.9 ಲಕ್ಷಗಳಿಗೆ ಗುತ್ತಿಗೆ ನೀಡಲಾಗಿದ್ದು, ಅದನ್ನು ನಿಯಮಾನುಸಾರ ಮಾಡಲಾಗಿದೆ ಮತ್ತು ಜಿಲ್ಲಾಧಿಕಾರಿಗಳಿಂದ ಅನುಮತಿ ಪಡೆಯಲಾಗಿದೆ. ದಿ.15/4/15 ರಂದು ಇಂಜೆಕ್ಷನ್ ಸಿಸ್ಟ್ರಿಯಾಜೋಮ್ ಸಾಲ್ಬ್ಯಾಕ್ಟಂ ಈ–ಟೆಂಡರ್ ಮೂಲಕ ಖರೀದಿಸಲಾಗಿದೆ. ಜಿಲ್ಲಾ ಪಂಚಾಯತ್, ಚಿತ್ರದುರ್ಗ ಇವರಿಂದ ಕಟ್ಟಡ ರಿಪೇರಿಗೆ ರೂ.63 ಲಕ್ಷ ಬಿಡುಗಡೆಯಾಗಿದ್ದು, ಆಸ್ಪತ್ರೆಯ ಕಟ್ಟಡ ಕಾಮಗಾರಿ ಕೆಲಸವನ್ನು ನಿರ್ಮಿತಿ ಕೇಂದ್ರ, ಚಿತ್ರದುರ್ಗ ಇವರಿಗೆ ಜಿಲ್ಲಾ ಪಂಚಾಯತ್ ವತಿಯಿಂದಲೇ ಹಂಚಿಕೆಯಾಗಿರುತ್ತದೆ. ದಿ.13/11/14 ರಂದು ಅವರು ಜಿಲ್ಲಾ ಶಸ್ತ್ರ ಚಿಕಿತ್ಸಕರಾಗಿ ಪ್ರಭಾರ ವಹಿಸಿಕೊಳ್ಳುವ ಮೊದಲೇ ಸದರಿ ಕೆಲಸ ಪ್ರಾರಂಭವಾಗಿತ್ತು. ಆದ್ದರಿಂದ, ಸದರಿ ಯೋಜನೆಗೂ ಎದುರುದಾರರಿಗೂ ಯಾವುದೇ ಸಂಬಂಧವಿರುವುದಿಲ್ಲ. ದೂರುದಾರರು ದುರುದ್ದೇಶದಿಂದ ದೂರನ್ನು ನೀಡಿದ್ದು, ಅವರು ಆಗಾಗ್ಗೆ ಆಸ್ಪತ್ರೆಗೆ ಬಂದು ಎಲ್ಲರನ್ನು ಬ್ಲಾಕ್‌ಮೇಲ್ ಮಾಡುತ್ತ ಸಿಬ್ಬಂದಿಗಳಿಗೆ ಕರ್ತವ್ಯ ನಿರ್ವಹಿಸಲು ಅಡಚಣೆ ಮಾಡಿರುತ್ತಾರೆಂದು ಹೇಳಿರುತ್ತಾರೆ.

4) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಅನುದಾನದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಮತ್ತು ಕೆ.ಟಿ.ಪಿ.ಪಿ. ನಿಯಮಗಳನ್ನು ಪಾಲಿಸಿರುವುದಿಲ್ಲವೆಂದು ಆಪಾದಿಸಿದ್ದು, ದೂರುದಾರರ ಆಪಾದನೆಯನ್ನು ಎದುರುದಾರರು ಅಲ್ಲಗಳೆದಿರುತ್ತಾರೆ ಮತ್ತು ಕೆ.ಟಿ.ಪಿ.ಪಿ. ನಿಯಮಾವಳಿಯಂತೆ ಕ್ರಮವನ್ನು ಕೈಗೊಳ್ಳಲಾಗಿದೆ ಮತ್ತು ಮೇಲಾಧಿಕಾರಿಗಳಿಂದ ಅನುಮತಿಯನ್ನು ಕೂಡ ಪಡೆಯಲಾಗಿದೆಯೆಂದು ಹೇಳಿರುತ್ತಾರೆ. ದೂರುದಾರರ ದೂರು ಹಾಗೂ ಎದುರುದಾರರ ಆಕ್ಷೇಪಣೆಯ ಆಧಾರದಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲದ ಕಾರಣ ಹಾಗೂ ಎದುರುದಾರರು ನೀಡಿರುವ ಆಕ್ಷೇಪಣೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸುವುದು ಮತ್ತು ಕಾಮಗಾರಿಯನ್ನು ಮಾಡಿದ ಸ್ಥಳವನ್ನು ಹಾಗೂ ಖರೀದಿ ಮಾಡಲಾಗಿದೆಯೆನ್ನುವ ಯಂತ್ರಗಳನ್ನು ಕೂಡ ಪರಿಶೀಲಿಸುವ ಅಗತ್ಯತೆ ಕಂಡುಬಂದ ಕಾರಣ, ದೂರುದಾರರ ದೂರಿಗೆ ಸಂಬಂಧಿಸಿದಂತೆ ತನಿಖೆ ನಡೆಸಿ ದಾಖಲಾತಿಗಳೊಂದಿಗೆ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು.

5) ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ, ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

"ವಿಚಾರಣಾಧಿಕಾರಿಗಳಾದ ಶ್ರೀ.ಹೆಚ.ಎಸ್.ರಾಷ್ಟ್ರಪತಿ, ಪಿ.ಐ, ಕ.ಲೋ, ಚಿತ್ರದುರ್ಗ ರವರು ದೂರುದಾರರಾದ ಶ್ರೀ.ಹನುಮಂತಪ್ಪದುರ್ಗ, ಚಿತ್ರದುರ್ಗ ರವರು ಸಲ್ಲಿಸಿರುವ ದೂರು ಅರ್ಜಿಯಲ್ಲಿ ಮಾಡಿರುವ ಆಪಾದನೆಗಳ ಸಂಬಂಧ ಮಾಹಿತಿ ಪಡೆಯುವ ಕುರಿತು ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ರವರಿಗೆ ಪತ್ರ ಬರೆದು ಮಾಹಿತಿ ಹಾಗೂ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ವಿಚಾರಣಾ ಕಾಲಕ್ಕೆ ಪಡೆದುಕೊಂಡ ಮಾಹಿತಿ ಹಾಗೂ ದಾಖಲೆಗಳ ಪರಿಶೀಲನೆಯಿಂದ ಕಂಡುಬಂದಿರುವುದೇನೆಂದರೆ, ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ 2015ನೇ ಸಾಲಿನಲ್ಲಿ ವಿವಿಧ ಚಿಕಿತ್ಸ ಪರಿಕರಗಳು ರೆಫ್ರಿಜರೇಟರ್, ಯುಪಿಎಸ್ ಹಾಗೂ ಔಷಧಿ ಸಾಮಾಗ್ರಿಗಳನ್ನು ಕೆ.ಟಿ.ಪಿ.ಪಿ. ನಿಯಮಾವಳಿಗಳನ್ನು ಪಾಲಿಸದೇ ಕಾನೂನು ಬಾಹಿರವಾಗಿ ಖರೀದಿಸಿರುವ ಬಗ್ಗೆ ಮೇಲ್ಕಂಡ ದೂರುದಾರರು ಈ ಹಿಂದೆಯೇ ಆರೋಗ್ಯ ಇಲಾಖೆಗೆ ನೀಡಿದ ದೂರಿನ ಸಂಬಂಧ ವಿಚಾರಣೆಗೆ ಸಂಬಂಧಪಟ್ಟ ಕಡತಗಳನ್ನು ನಿರ್ದೇಶನಾಲಯದ ಜಾಗೃತ ಕೋಶವು ವಶಕ್ಕೆ ಪಡೆದಿದ್ದು, ಸದರಿ ಆರೋಪಗಳ ಬಗ್ಗೆ ವಿಚಾರಣೆ ನಡೆಯುತ್ತಿರುತ್ತದೆ. ಆದರೆ, ಸದರಿ ಕಡತಗಳನ್ನು ನಿರ್ದೇಶನಾಲಯದ ಜಾಗೃತ ಕೋಶಕ್ಕೆ ಕಳುಹಿಸಿದ ಬಗ್ಗೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಯಾವುದೇ ದಾಖಲೆಗಳನ್ನಾಗಲೀ ಅಥವಾ ಕಡತದ ದಾಖಲೆಗಳ ನಕಲುಗಳನ್ನಾಗಲೀ ನಿರ್ವಹಿಸಿರುವುದಿಲ್ಲ.

ಹಾಗೆಯೇ ಜಿಲ್ಲಾ ಆಸ್ಪತ್ರೆಯಲ್ಲಿ 2015 ರಲ್ಲಿ 2 ಹಿಮೋಡಯಾಲಿಸಿಸ್ ಮಿಷನ್‌ಗಳನ್ನು ಖರೀದಿಸಿದ್ದು, ಆದರೆ ಅರ್ಜಿ ವಿಚಾರಣಾ ಕಾಲಕ್ಕೆ ಪಿ.ಐ.ರವರು ಪ್ರಥಮ ಬಾರಿಗೆ ಪತ್ರ ಮುಖೇನ ಮಾಹಿತಿ ಕೋರಿದಾಗ ಆಸ್ಪತ್ರೆಗೆ ಯಾವುದೇ ಹಿಮೋಡಯಾಲಿಸಿಸ್ ಮಿಷನ್‌ಗಳನ್ನು ಖರೀದಿಸಿಲ್ಲವೆಂದು ತಿಳಿಸಿ ಪುನಃ ಮತ್ತೊಮ್ಮೆ 2 ಮಿಷನ್‌ಗಳನ್ನು ಖರೀದಿಸಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ.

ಸಿಬ್ಬಂದಿ ವರ್ಗದವರಿಂದ ಮಾಮೂಲಿ ವಸೂಲಿ ಮಾಡುವ ಬಗ್ಗೆ ಹಾಗೂ ಇತರೆ ಭ್ರಷ್ಟಾಚಾರದ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿ ಅರ್ಜಿದಾರರು ಮಾಡಿರುವ ಆಪಾದನೆಗಳನ್ನು ಪುಷ್ಠೀಕರಿಸುವಂತಹ ಮಾಹಿತಿಯು ಲಭ್ಯವಾಗಿರುವುದಿಲ್ಲ. ಅಲ್ಲದೆ ಆಸ್ಪತ್ರೆಯ ವಿವಿಧ ಚಿಕಿತ್ಸೆಗಳಿಗೆ ಡಾ:ಜಗದೀಶ್‌ರವರು ತಮ್ಮ ಅನುಕೂಲಕ್ಕೆ ತಕ್ಕಹಾಗೆ ಮೊತ್ತವನ್ನು ನಿಗಧಿಪಡಿಸಿರುತ್ತಾರೆ ಎನ್ನುವ ಆಪಾದನೆಯು ಸುಳ್ಳಿನಿಂದ ಕೂಡಿರುತ್ತದೆ. ಕಾರಣ ಸದರಿ ವಿವಿಧ ಚಿಕಿತ್ಸಾ ಮೊತ್ತಗಳನ್ನು ಜಿಲ್ಲಾ ಆರೋಗ್ಯ ರಕ್ಷಾ ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ ತೀರ್ಮಾನಿಸಿರುವಂತೆ ನಿಗಧಿಪಡಿಸಲಾಗಿರುತ್ತದೆ.

ಈ ಎಲ್ಲಾ ಅಂಶಗಳಿಂದ ದೃಢಪಡುವುದೇನೆಂದರೆ, ಡಾ:ಜಗದೀಶ್, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ರವರು ಕೆ.ಟಿ.ಪಿ.ಪಿ. ನಿಯಮಗಳನ್ನು ಉಲ್ಲಂಘಿಸಿರುವುದು, ಡಯಾಲಿಸಿಸ್ ಯಂತ್ರದ ಖರೀದಿ ಬಗ್ಗೆ ಎರಡೆರಡು ಬಾರಿ ವಿವಿಧ ಮಾಹಿತಿಗಳನ್ನು ನೀಡಿರುವುದು ಹಾಗೂ ಸಿಪ್ರೀಯಾಜೋನ್ ಸಾಲ್ ಬೆಕ್ಟ್‌ಮ್ ಇಂಜೆಕ್ಷನ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವುದು ಮತ್ತು ಲೋಕಾಯುಕ್ತ ಅಧಿಕಾರಿಗಳು ವಿಚಾರಣೆ ಸಂಬಂಧ ಮಾಹಿತಿ ಕೋರಿದಾಗ ಸರಿಯಾದ ಮಾಹಿತಿ ನೀಡದೇ ತಪ್ಪು ಮಾಹಿತಿ ನೀಡಿ ವಿಚಾರಣೆಯ ದಿಕ್ಕನ್ನು ತಪ್ಪಿಸಲು ಪ್ರಯತ್ನಿಸಿರುವುದು ಮೇಲ್ನೋಟಕ್ಕೆ ದೃಢಪಡುತ್ತದೆ. ಆದ್ದರಿಂದ, ಸದರಿ ಡಾ:ಜಗದೀಶ್, ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ ಇವರ ವಿರುದ್ಧ ಸೂಕ್ತ ಇಲಾಖಾ ಕ್ರಮ ಕೈಗೊಳ್ಳುವ ಕುರಿತು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರೊಂದಿಗೆ ಪತ್ರ ವ್ಯವಹಾರ ಮಾಡಲು ಕೋರಿದೆ" ಎಂದು ವರದಿ ನೀಡಿರುತ್ತಾರೆ.

6) ಪೊಲೀಸ್ ಅಧೀಕ್ಷಕರ ವರದಿಯನ್ನು ಪರಿಶೀಲಿಸಿದಾಗ, ಕೆ.ಟಿ.ಪಿ.ಪಿ. ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಕಾನೂನು ಬಾಹಿರವಾಗಿ ಡಯಾಲಿಸಿಸ್ ಯಂತ್ರಗಳ ಮತ್ತು ಇಂಜೆಕ್ಷನ್‌ಗಳ ಖರೀದಿಯಲ್ಲಿ ಅವ್ಯವಹಾರ ಮಾಡಿರುತ್ತಾರೆಂದು ಕಂಡುಬರುತ್ತದೆ.

7) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಎದುರುದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

3/1/18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.

03/01